# 10. ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಕೇಶವಾಪುರ

**"ಕರುಣಾಳು ಬಾ ಬೆಳಕೆ ಮುಸುಕಿದೀ ಮಬ್ಬಿನಲಿ ಕೈ ಹಿಡಿದು ನಡೆಸೆನ್ನನು............."**

*'ಜ್ಞಾನವೆಂಬ ದೀವಿಗೆ ಮಾತ್ರ ಮಾನವನ ಅಂಧಕಾರವನ್ನು ಹೋಗಲಾಡಿಸಿ ಬೆಳಕನ್ನು ತೋರುವ, ಸನ್ಮಾರ್ಗದಲಿ ನಡೆಸಿ ಗುರಿ ತಲುಪಿಸೊ ಭರವಸೆಯ ಬೆಳಕು.'*



ಸಹ್ಯಾದ್ರಿಯ ಸಹೋದರಿ ಕೊಡಚಾದ್ರಿಯ ತಪ್ಪಲಿನಲ್ಲಿ ಮಲೆನಾಡಿನ ಮುಕುಟ ಎಂದೇ ಖ್ಯಾತಿ ಹೊಂದಿರುವ ನಮ್ಮ ಹೆಮ್ಮೆಯ ಜಿಲ್ಲೆ ಶಿವಮೊಗ್ಗ. ಈ ಜಿಲ್ಲೆಯ ವೈಭವಕ್ಕೆ ಹಿರಿಮೆಯ ಗರಿಯಾಗಿರುವ ತಾಲ್ಲೂಕು, ನಿಸರ್ಗವೇ ಮೈದೋರಿ ಕನ್ನಡದ ಕವಿಗಳಿಗೆ ಕಾವ್ಯ ಸ್ಫೂರ್ತಿಯಾಗಿರುವ ನಮ್ಮ ಹೊಸನಗರ. ಶೈಕ್ಷಣಿಕ ಪ್ರಗತಿಯಲ್ಲಿ ಅಗ್ರ ಪಂಕ್ತಿಯಲ್ಲಿ ನಿಲ್ಲುವ ಕ್ಲಸ್ಟರ್ ಮಾರುತಿಪುರ. ಈ ಕ್ಲಸ್ಟರ್‌ನ ಹಿರಿಮೆಯ ಗರಿಯಂತಿರುವ ಶಾಲೆ......

1997–98ರಿಂದ ಸರ್ಕಾರೇತರ ಕಟ್ಟಡದಲ್ಲಿ ಆರಂಭವಾದ ಈ ಶಾಲೆಯು 98–99ರ ವರೆಗೆ ನಡೆದು, ನಂತರ 1999–2000ನೇ ಶೈಕ್ಷಣಿಕ ವರ್ಷದಿಂದ ಸ್ವಂತ ಸರ್ಕಾರಿ ಕಟ್ಟಡದಲ್ಲಿ ತನ್ನ ಶಿಕ್ಷಣ ದಾಸೋಹ ಪ್ರಾರಂಭಿಸಿತು.

ಆರಂಭದಲ್ಲಿ ಕಲಿಸುವಿಕೆಯಲ್ಲಿ ಪರಿಣಾಮಕಾರಿಯಾಗಿ ಸದ್ದು ಮಾಡದ ಶಾಲೆ 2016–17ನೇ ಶೈಕ್ಷಣಿಕ ವರ್ಷದವರೆಗೂ ದಿನದೂಡುತಾ ಬಂದಿತು. ಹೆಚ್ಚುವರಿ ಶಿಕ್ಷಕರ ವರ್ಗಾವಣೆಯಲ್ಲಿ ಸ್ಥಳ ನಿಯುಕ್ತಿಗೊಂಡು ಬಂದಂತ ಶ್ರೀಮತಿ ಶಮಂತಕಮಣಿ ಹಾಗೂ ಶ್ರೀಮತಿ ರೇಣುಕಾ. ಡಿ.ಎಮ್ ಶಾಲೆಯ ಪುನರುಜ್ಜೀವನಕ್ಕೆ ನಾಂದಿ ಹಾಡಿದರು.

ಈ ಸುಸಂದರ್ಭದಲ್ಲಿ ಇಲಾಖೆಯ ಪರವಾಗಿ ಪ್ರತಿ ಹೆಜ್ಜೆಯಲ್ಲು ಮಾರ್ಗದರ್ಶಿಸಿದವರಲ್ಲಿ ಸಮೂಹ ಸಂಪನ್ಮೂಲ ವ್ಯಕ್ತಿಯಾದ ಶ್ರೀಯುತ ಲಿಂಗರಾಜ್.ಎಮ್.ಸಿ ರವರು. ಕುಂಟುತ್ತಾ ಸಾಗುತ್ತಿದ್ದ ನಲಿಕಲಿ ತರಗತಿಗೆ ಸೂಕ್ತ ಕಾಯಕಲ್ಪ ರೂಪಿಸಲು ಎಲ್ಲ ಹಂತದಲ್ಲೂ ಶಿಕ್ಷಕರಿಗೆ ನೆರವಾದರು. ನಲಿಕಲಿ ತರಗತಿಯ ಭೌತಿಕ ಮತ್ತು ಆಂತರಿಕ ಸ್ವರೂಪದ ನಿಯಮಿತ ಬದಲಾವಣೆಗೆ ಯೋಜನೆ ರೂಪಿಸಿಕೊಟ್ಟರು. ಹಾಗೆಯೇ ಸಮುದಾಯದ ಸಹಕಾರವೂ ದೊರೆಯಲಾರಂಭಿಸಿತು. ಶಾಲೆಯ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲು ಮೊದಲ ಹೆಜ್ಜೆ ಇಡಲಾಯಿತು. ಶಿಕ್ಷಣ

ಇಲಾಖೆ ಜಾರಿಗೊಳಿಸಿರುವ ಹಲವಾರು ಅತ್ಯುತ್ತಮ ಕಾರ್ಯಕ್ರಮಗಳಲ್ಲಿ ನಲಿ-ಕಲಿಯೂ ಒಂದು. ಈ ವೈಜ್ಞಾನಿಕ ಕಲಿಕಾ ಪದ್ದತಿಯನ್ನು ಉತ್ತಮವಾಗಿ ಅನುಷ್ಠಾನ ಮಾಡುವಲ್ಲಿ ಯಶಸ್ವಿಯಾಗಿರುವ ಶಾಲೆ ನಮ್ಮದು.

ಶಾಲೆಯಲ್ಲಿ ಒಟ್ಟು 1 ರಿಂದ 5ನೇ ತರಗತಿವರೆಗೆ 14 ಮಕ್ಕಳಿದ್ದು, ನಲಿಕಲಿ ವಿಧಾನದಲ್ಲಿ 10 ಮಕ್ಕಳು ಕಲಿಯುತ್ತಿದ್ದಾರೆ. ಶ್ರೀಮತಿ ಶಮಂತಕಮಣಿ ಕಲಿಕಾ ಬೋಧನಾ ಅನುಭವಗಳಿಂದ ನುರಿತ ಶಿಕ್ಷಕರಲ್ಲಿ ಒಬ್ಬರಾದ ಶಿಕ್ಷಕಿ. ಇಲಾಖೆಯಲ್ಲಿ 28 ವರ್ಷಗಳ ಸುಧೀರ್ಘ ಅನುಭವವಿರುವ ಇವರು ಮಕ್ಕಳಿಗೆ ಮಾತೃ ಪ್ರೀತಿಯನ್ನು ತೋರುತ್ತಾ ಕನ್ನಡ ಪ್ರೇಮವನ್ನು ಬಿತ್ತುತ್ತಾ ಮತ್ತು ಬದುಕಿಗೆ ಗಣಿತವನ್ನು ಸರಳವಾಗಿ ಕಲಿಸುವಲ್ಲಿ ಮುಂದಾಗಿದ್ದಾರೆ.

ಕನ್ನಡ ಕಲಿಕೆಗೆ ಸೂಕ್ತ ವಾತಾವರಣ ನಿರ್ಮಿಸುತ್ತಾ, ಹುಡುಗ ಹುಡುಗಿ ಲೋಗೋ ಇರುವ ಹಾಡಿನ ಕಾರ್ಡ್‌ನ್ನು ತಮ್ಮ ಸುಶ್ರಾವ್ಯ ಧ್ವನಿಯ ಮೂಲಕ ಮಕ್ಕಳನ್ನು ತರಗತಿ ವಾತಾವರಣಕ್ಕೆ ಹೊಂದಿಸುತ್ತಾರೆ. ಹಲವಾರು ಕಲಿಕಾ ಪೂರಕ ಚಟುವಟಿಕೆಗಳ ಮೂಲಕ ಮಕ್ಕಳಿಗೆ ಕಲಿಕೆಗೆ ಪ್ರೇರೇಪಿಸುತ್ತಾರೆ. ತರಗತಿಯ ಎಲ್ಲಾ ಮಕ್ಕಳಿಗೂ ಕನ್ನಡ ಕಲಿಕೆಗೆ ಆಸಕ್ತಿ ಮೂಡಿಸಲು ಹೊಸ ಹೊಸ ಕಲಿಕೋಪಕರಣಗಳನ್ನು ಪರಿಣಾಮಕಾರಿಯಾಗಿ ಬಳಸುತ್ತಾರೆ. ಸುಸ್ಪಷ್ಟವಾದ ಹಾಗೂ ನವಿರಾದ ಪದಗಳ ಮೂಲಕ ಮಕ್ಕಳ ಆಲಿಸುವಿಕೆಯನ್ನು ವೃದ್ಧಿಸುತ್ತಾರೆ. ಶುದ್ಧ ಬರವಣಿಗೆ ಮೂಲಕ ಗಮನ ಕೇಂದ್ರೀಕರಿಸಲು ನೆರವಾಗುತ್ತಾರೆ. ಮಕ್ಕಳ ಉಚ್ಚಾರಣಾ ದೋಶವನ್ನು ತಿದ್ದಲು ಮೌಖಿಕ ಅಭ್ಯಾಸ ಚಟುವಟಿಕೆಗಳನ್ನು ಉತ್ತಮವಾಗಿ ಬಳಸುತ್ತಾರೆ.

ಗಣಿತವನ್ನು ಆಸಕ್ತಿಯುತವಾಗಿ ಕಲಿಯಲು ಗಣಿತ ಕಲಿಕಾ ವಾತಾವರಣ ನಿರ್ಮಿಸುವಲ್ಲಿ ಯಶಸ್ವಿಯಾಗಿರುತ್ತಾರೆ. ನಿತ್ಯ ಜೀವನಕ್ಕೆ ಗಣಿತವನ್ನು ಪರಿಣಾಮಕಾರಿಯಾಗಿ ಅನ್ವಯಿಸಿಕೊಳ್ಳಲು ಮಕ್ಕಳಿಗೆ ಸಹಕಾರಿಯಾಗಿದ್ದಾರೆ. ಮೂಲಕ್ರಿಯೆಗಳನ್ನು ಸುಲಭವಾಗಿ ಕಲಿಯಲು ಹೊಸ ತಂತ್ರಗಳ ಮೂಲಕ ಕಲಿಕೆ ಪರಿಣಾಮಕಾರಿಯಾಗಿಸಿದ್ದಾರೆ.

ಇವರ ಜೊತೆ ಪರಿಣಾಮಕಾರಿ ಕಲಿಕೆಗೆ ಕೈಜೋಡಿಸಿರುವವರಲ್ಲಿ ಶ್ರೀಮತಿ ರೇಣುಕಾ ಡಿ.ಎಮ್. ಶಿಕ್ಷಕಿಯೂ ಕೂಡಾ ಮಕ್ಕಳಿಗೆ ಪರಿಸರ ಅಧ್ಯಯನ ಹಾಗೂ ಇಂಗ್ಲೀಷ್ ಕಲಿಕೆಗೆ ತಮ್ಮದೇಯಾದ ಸಹಕಾರ ನೀಡುತ್ತಿದ್ದಾರೆ. ಆಕರ್ಷಕ ಕಲಿಕಾ ಮಾದರಿಗಳು ಹಾಗೂ ಉಪಯುಕ್ತ ಕಲಿಕೋಪಕರಣಗಳ ಮೂಲಕ ಕಲಿಕೆಯನ್ನು ಅರ್ಥಪೂರ್ಣಗೊಳಿಸಿದ್ದಾರೆ.

ಇಂಗ್ಲೀಷ್ ವ್ಯಾಮೋಹದಿಂದ ಮಕ್ಕಳನ್ನು ಖಾಸಗೀ ಶಾಲೆಗೆ ಕಳಿಸುವ ಪೋಷಕರಿಗೆ ವ್ಯತಿರಿಕ್ತವೆಂಬಂತೆ ಈ ಶಾಲೆಯಲ್ಲಿ ಇಂಗ್ಲೀಷ್ ಕಲಿಕೆಗೆ ಅತ್ಯುತ್ತಮ ಅವಕಾಶ ನೀಡಿದ್ದಾರೆ. ಯೋಜನೆಗಳು ಹಾಗೂ ಕ್ಷೇತ್ರ ಭೇಟಿಗಳ ಮೂಲಕ ವೈಜ್ಞಾನಿಕ ಕಲಿಕೆಗೆ ಪ್ರೇರೇಪಿಸುತ್ತಾರೆ.

*2018-19ನೇ ಸಾಲಿನಲ್ಲಿ ಇಲಾಖೆವತಿಯಿಂದ ನಡೆದ ನಲಿಕಲಿ ಮೈಕ್ರೋ ಅಧ್ಯಯನ ಮತ್ತು ನಲಿಕಲಿ ಮ್ಯಾಕ್ರೋ ಅಧ್ಯಯನ ಎರಡರಲ್ಲೂ ನಮ್ಮ ಶಾಲೆಯು ಎ+ ಶ್ರೇಣಿ ಪಡೆದುದು ನಮ್ಮ ಪರಿಶ್ರಮಕ್ಕೆ ಸಂದ ಗೌರವ ಎಂದು ಭಾವಿಸುವೆವು. ಪ್ರೇರಣ ಕಾರ್ಯಕ್ರಮ ಹಾಗೂ ಓದು ಕರ್ನಾಟಕ ಕಾರ್ಯಕ್ರಮದ ವ್ಯವಸ್ಥಿತ ಅನುಪಾಲನೆ ಮಕ್ಕಳ ಕಲಿಕೆಯ ಮೇಲೆ ಪೂರಕ ಪರಿಣಾಮ ಬೀರಿದೆ.* ಒಟ್ಟಾರೆಯಾಗಿ ನಲಿ-ಕಲಿ ವಿಧಾನದ ಬುನಾಧಿ ಸ್ವಕಲಿಕೆ, ಸ್ವವೇಗದ ಕಲಿಕೆ, ಸಂತಸದ ಕಲಿಕೆಯನ್ನು ಶಾಲೆಯಲ್ಲಿ ಅಕ್ಷರಶಃ ಅನ್ವಯಿಸಿದ್ದಾರೆ.

ಪ್ರತಿಭಾ ಕಾರಂಜಿಯಂತಹಾ ಕಲಿಕಾ ಪೂರಕ ಚಟುವಟಿಕೆಗಳಲ್ಲಿ ಮಕ್ಕಳ ಸಾಧನೆ ಹಾಗೂ ಸಮುದಾಯದ ಭಾಗವಹಿಸುವಿಕೆ ಹರ್ಷವನ್ನು ತಂದಿದೆ. ಪ್ರತಿ ಶನಿವಾರ ನಿಯಮಿತವಾಗಿ ಬ್ಯಾಗ್ ರಹಿತ ದಿನವನ್ನು ಕಲಿಕೆಗೆ ಪೂರಕವಾಗಿ ಪೂರ್ವ ಯೋಜಿತವಾಗಿ ಅನುಷ್ಠಾನ ಮಾಡಲಾಗಿದ್ದು ಪೋಷಕರಿಂದ ಉತ್ತಮ ಅಭಿಪ್ರಾಯ ಲಭಿಸಿದೆ. ನಿಯಮಿತವಾಗಿ ಪೋಷಕರ ಹಾಗೂ ಎಸ್‌ಡಿಎಮ್‌ಸಿ ಸಭೆ ನಡೆಸಿ ಶಾಲೆಯ ಶೈಕ್ಷಣಿಕ ಪ್ರಗತಿಯ ಬಗ್ಗೆ ಚರ್ಚಿಸಿ ಸಹಕಾರ ಪಡೆಯಲಾಗುತ್ತಿದೆ.

ಪ್ರತಿ ತಿಂಗಳು ಡೀಪ್ ಕ್ಲೀನಿಂಗ್ ಅನ್ವಯಿಸುವ ಮೂಲಕ ಅಕ್ಷರ ದಾಸೋಹ ಕಾರ್ಯಕ್ರಮದ ವ್ಯವಸ್ತಿತ ನಿರ್ವಹಣೆ ಮಾಡಲಾಗುತ್ತಿದೆ. ನಮ್ಮ ಮುಂದಿನ ಗುರಿ ಶಾಲಾ ವನದ ಸುವ್ಯವಸ್ತಿತ ನಿರ್ಮಾಣ, ನಿರ್ವಹಣೆ. ಈ ನಿಟ್ಟಿನಲ್ಲಿ ಪ್ರಯತ್ನ ಸಾಗುತ್ತಿದ್ದು ಶೀಘ್ರದಲ್ಲಿ ಅನುಷ್ಠಾನಗೊಳ್ಳಲಿದೆ.

ಅಳಿವಿನಂಚಿನ ಕಡೆ ಸಾಗುತ್ತಿರುವ ಕನ್ನಡ ಶಾಲೆಗಳ ಈಗಿನ ಸ್ಥಿತಿಯನ್ನು ಬದಲಾಯಿಸಿ, ಕನ್ನಡ ಉಳಿವಿನ ಜೊತೆ ಇಂಗ್ಲೀಷ್ ಬಳಕೆಗೆ ಅವಕಾಶ ಕಲ್ಪಿಸಿ, ಗ್ರಾಮೀಣ ಮಕ್ಕಳಿಗೆ ಈ ಶಾಲೆಯ ಹಾಗೂ ಶಿಕ್ಷಕರ. ಪೋಷಕರ, ಎಸ್.ಡಿ.ಎಮ್.ಸಿ ಕೊಡುಗೆ ಅಪಾರ.

ಕಾಲ ಕಾಲಕ್ಕೆ ಇಲಾಖೆಯಿಂದ ಸೂಕ್ತ ಮಾಹಿತಿಯನ್ನು, ಮಾರ್ಗದರ್ಶನಗಳನ್ನು ಕ್ಲಸ್ಟರ್ ಹಾಗೂ ಬ್ಲಾಕ್ ಹಂತದಿಂದ ಒದಗಿಸುತ್ತಿರುವ ಎಲ್ಲ ಹಂತದ ಅಧಿಕಾರಿಗಳೂ ಕೂಡಾ ಈ ಶಾಲೆಯ ಇಂದಿನ ಯಶಸ್ಸಿಗೆ ಭಾಜನರು.

## ಶಿಕ್ಷಕರ ಸಂಪೂರ್ಣ ಸಹಾಯದ ಗುಂಪಿನಲ್ಲಿ ಕಲಿಕೆಯಲ್ಲಿ ನಿರತ ಮಕ್ಕಳು :–





**ಕಲಿಕಾ ಸಾಮಗ್ರಿಗಳ ಸುವ್ಯವಸ್ತಿತ ಜೋಡಣೆ:–**





**ಅಂದವಾದ ಕಲಿಕಾ ಚಪ್ಪರ**




ಕಲಿಕಾ ತಟ್ಟೆಗಳಲ್ಲಿ ಮಕ್ಕಳ ಸಂತಸದ ಕಲಿಕೆ




ನಿತ್ಯ ಜೀವನದ ಉದಾಹರಣೆಯೊಂದಿಗೆ ಗಣಿತದ ಆಕೃತಿಗಳ ಕಲಿಕೆ

ಅತಿ ಸರಳವಾಗಿ ಸಂತಸದಿಂದ ಕಲಿಯುವ ಮಕ್ಕಳು.......ಮಾನಸಿಕ ಸಾಮರ್ಥ್ಯ ಹೆಚ್ಚಿಸುವ ಚಟುವಟಿಕೆ




ತನ್ನಿಷ್ಟವಾದ ಕ್ರಾಫ್ಟ್ ಚಟುವಟಿಕೆ ಮೂಲಕ ಸ್ವವೇಗದ ಕಲಿಕೆ ನಿರತ ಸಿ.ಡಬ್ಲ್ಯೂ.ಎಸ್.ಎನ್ ಮಗು........ಕಲಿಕೆಗೆ ಪೂರಕ ವಾತಾವರಣವಿದ್ದರೆ ಎಲ್ಲಮಕ್ಕಳೂ ಕಲಿಯುವರು ಎಂಬುದಕ್ಕೆ ನಿದರ್ಶನ








ಪ್ರಗತಿನೋಟದಲ್ಲಿ ತನ್ನ ಸಾಧನೆಯನ್ನು ತಾನೇ ಗುರ್ತಿಸುತ್ತಿರುವ ಮಗು.....ಕಲಿಕಾ ದೃಢೀಕರಣ

ಪ್ರತಿಯೊಬ್ಬರು ಮತ್ತೊಬ್ಬರಿಗೆ ಕಲಿಸುವ ವಿಧಾನದ ಅನುಸರಣೆ

ನಿಯಮಿತವಾಗಿ ಹವಾಮಾನ ನಕ್ಷೆ ಗುರ್ತಿಸುವ ಮಕ್ಕಳು....ಪರಿಸರದ ಬದಲಾವಣೆಗಳನ್ನು ಸೂಕ್ಷ್ಮವಾಗಿ ಗಮನಿಸಲು ಸಹಕಾರಿ







ಮಾಡಿ ಕಲಿ ನೋಡಿ ತಿಳಿ ಎಂಬಂತೆ ಕ್ರಾಫ್ಟ್ ಒಂದು ಉತ್ತಮ ಸಾಧನ



ಕಲಿಕೆಗೆ ಸಿಗುವ ಎಲ್ಲ ವಿಷಯಗಳನ್ನು ಶಿಕ್ಷಕರೊಂದಿಗೆ ಚರ್ಚಿಸಿಯೇ ಮುಂದಿನ ಹಂತಕ್ಕೆ ಹೋಗುವ ಮಕ್ಕಳು

ಸೂಕ್ತ ಅವಕಾಶ ದೊರೆತರೆ ನಾನೂ ಕೂಡ ಏನಾದರೂ ಸಾಧಿಸ ಬಲ್ಲೆನೆಂಬ ಆತ್ಮವಿಶ್ವಾಸ ಬೆಳೆಸುವ ಸನ್ನಿವೇಶ ಕೂಡಿಕಲಿ ತತ್ವದ ಅನುಸರಣೆ......... ಆಡುತ್ತಾ.....ಹಾಡುತ್ತಾ...... ಭಯಮುಕ್ತ ಮನದಲ್ಲಿ ಕಲಿಕೆಗೆ ಅವಕಾಶ ಸಂತಸದ ಕಲಿಕೆ ಶಾಶ್ವತ ಕಲಿಕೆಗೆ ದಾರಿ ಎಂಬಂತೆ.......ದಿನವೂ ಶಾಲೆಯತ್ತಲೇ ಮಕ್ಕಳ ಚಿತ್ತಕ್ಕೆ ಕಾರಣ ಬರವಣಿಗೆ ಅಭ್ಯಾಸಕ್ಕೆ ಮುಕ್ತ ಹಾಗೂ ಉಪಯುಕ್ತ ಸಾಧನ ಈ ವಾಲ್‌ಸ್ಲೇಟ್